**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**LAC 9/2021 PW :-02**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ ಆರ್ ಎಚ್ ವಕೀಲರಿಂದಃ**

ಎಂ ಎಫ ಎ ನಂ. 102332/2020 ತೀರ್ಪಿನ ದೃಢಿಕೃತ ಪ್ರತಿಯನ್ನು ನಿಪಿ-3 ಎಂದು, ಭೂಸ್ವಾದೀನ ಕಾಯ್ದೆ ಕಲಂ 18 ರರಲ್ಲಿ ಸಲ್ಲಿಸಿದ ಅರ್ಜಿಯನ್ನು ನಿಪಿ-4 ಎಂದು, ಪಂಚಾಯದಸ್ತ ಮತ್ತು ಉಪವಿಭಾಗ ಅಧಿಕಾರಿಗಳು ಕಲಂ 17 ರಡಿಯಲ್ಲಿ ನೀಡಿದ ನೋಟಿಸ ನಿಪಿ-5 ಮತ್ತು 6, ವಿಶೇಷ ಭೂಸ್ವಾದೀನ ಅಧಿಕಾರಿಗಳು ಕಳುಹಿಸಿಕೊಟ್ಟ ಅರ್ಜಿ ಮತ್ತು ಇಂಡೆಕ್ಸ ಪ್ರತಿಗಳನ್ನು ಶ್ರೀ ಎ ಎಫ ಆರ್ ವಕೀಲರ ತಕರಾರಿನ ಮೇರೆಗೆ ನಿಪಿ 7 ಎಂದು ಗುರುತಿಸಲಾಯಿತು.

**ಪಾಟೀಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**LAC 9/2021 PW :-01**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎ ಜಿ ಪಿ ವಕೀಲರಿಂದಃ**

ಹುಬ್ಬಳ್ಳಿಯಿಂದ ನಮ್ಮ ಹೊಲ 2 ಕಿಮೀ ದೂರದಲ್ಲಿದೆ. ನಮ್ಮ ಹೊಲದ ಸುತ್ತಮುತ್ತ ಕೃಷಿ ಭೂಮಿಗಳು ಮತ್ತು ರಸ್ತೆಗಳು ಇವೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಗೆ ನಾನು ಓದಿ ಸಹಿ ಮಾಡಿದ್ದೇನೆ. ಭೂ ಸ್ವಾಧೀನ ಅಧಿಕಾರಿ ನಮಗೆ ನೋಟಿಸ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ರೇಲ್ವೆ ಹಳಿಗೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಭೂ ಸ್ವಾಧೀನ ಅಧಿಕಾರಿಗಳು ಅವಾರ್ಡ ಮಾಡಿದ ನಂತರ ನೋಟಿಸ ಕೊಟ್ಟಿದ್ದಾರೆಂದರೆ ಸರಿಯಲ್ಲ. ಮೂರು ವರ್ಷದ ಭೂಮಿಯ ಮೌಲ್ಯವನ್ನು ನಿರ್ಧರಿಸಿ ಸಬ್ ರಿಜಿಸ್ಟರ ರವರು ಒಂದು ನಿಗದಿತ ಮೌಲ್ಯ ಮಾಡಿರುತ್ತಾರೆಂದರೆ ಗೊತ್ತಿಲ್ಲ. ನಮ್ಮ ಜಮೀನು ಯೋಗ್ಯವಾದ ಜಮೀನು ಅಲ್ಲ ಯಾವುದೇ ಜನವಸತಿ ಇಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಗೋಸ್ಕರ ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಮ್ಮ ಜಮೀನಿನ ಸುತ್ತಮುತ್ತ ವಿಮಾನನಿಲ್ದಾಣ ಮತ್ತು ರೇಲ್ವೆ ನಿಲ್ದಾಣ ಸರ್ಕಾರಿ ಕಚೇರಿಗಳು ಇವೆ ಅಂತಾ ಸುಳ್ಳು ಬರೆಸಿರುತ್ತೇನೆಂದರೆ ಸರಿಯಲ್ಲ. ಸರ್ಕಾರ ಮಾಡಿದ ನಿರ್ಧಾರ ಮಾಡಿದ ಬೆಲೆ ಸರಿಯಾಗಿದೆ ಮತ್ತು ಯೋಗ್ಯವಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗೂ ನಮ್ಮ ಜಮೀನಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಾನ್ಯ ಹೈಕೋರ್ಟ ನೀಡಿದ ತೀರ್ಪು ಮತ್ತು ನಮಗಾು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸರ್ಕಾರ ನಿಗದಿಪಡಿಸಿದ ಬೆಲೆ ಸರಿಯಾಗಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲಾತಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಎಡ್ ಜಿ ವಕೀಲರಿಂದಃ**

ನಾನು ಖಾಸಗಿ ಕೆಲಸ ಮಾಡುತ್ತೇನೆ. ನಾನೇ ಮಾಹಿತಿ ನೀಡಿ ಕಲಂ 18 ರಡಿಯಲ್ಲಿ ಭೂ ಸ್ವಾಧೀನ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದೆವು. ಅದರಲ್ಲಿ ನಮ್ಮ ಸಹೋದರಿಯರ ಹೆಸರು ಇವೆ ಎಂದರೆ ಸರಿ. ನಮ್ಮ ಸಹೋದರಿಯರು ಮದುವೆಯಾಗಿ ಹೋಗಿದ್ದಾರೆ ಆ ಕಾರಣದಿಂದ ಈ ಅರ್ಜಿಯಲ್ಲಿ ಸೇರಿಸಿಲ್ಲ. ಆದರೆ ಅವರು ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟಿಲ್ಲ. ಹೆಣ್ಣು ಮಕ್ಕಳಿಗೆ ಪರಿಹಾರ ಕೊಡಬೇಕಾಗುತ್ತದೆ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ

ಜಮೀನು ಉಣಕಲ್ ಗ್ರಾಮದ ಹದ್ದಿನಲ್ಲಿ ಬರುತ್ತದೆ. ಸಾಕ್ಷಿ ಮುಂದುವರೆದು ಅದು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಮ್ಮ ಜಮೀನಿನ ಸರ್ವೆ ನಂ 215/ಕ ಅದರ ವಿಸ್ತೀರ್ಣ 30 ಗುಂಟೆ. 12 ಗುಂಟೆ 12 ಅಣೆ ಸ್ವಾದೀನಪಡಿಸಿಕೊಂಡಿದ್ದಾರೆ. ರೇಲ್ವೆ ಹಳಿಗೆ ಸ್ವಾದಿನಪಡಿಸಿಕೊಂಡಿದ್ದಾರೆ. ಭೂ ಸ್ವಾದೀನ ಮಾಡುವಾಗ ಭೂ ಸ್ವಾದೀನ ಅಧಿಕಾರಿಗಳು ನೊಟಿಸ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ಜಮೀನನಲ್ಲಿ ಕಲ್ಲು ಹಾಕಿದ್ದರಿಂದ ಸ್ವಾದೀನ ಆಗಿದ್ದರ ಬಗ್ಗೆ ಗೊತ್ತಾಯಿತು. ನಾವು ಕಲ್ಲು ಹಾಕಿದ ನಂತರ ಮಾಹಿತಿ ತೆಗೆದುಕೊಂಡಿಲ್ಲ. ಭೂ ಸ್ವಾದೀನ ಅಧಿಕಾರಿಗಳು ಪರಿಹಾರ ನಿಗದಿಪಡಿಸಿದ ನೋಟಿಸನ್ನು ತೆಗೆದುಕೊಂಡಿಲ್ಲ. ಭೂ ಸ್ವಾದೀನ ಅಧಿಕಾರಿಗಳು ನಿಗದಿ ಮಾಡಿದ ಹಣವನ್ನು ತೆಗೆದುಕೊಂಡಿದ್ದೇವೆ. ಕೆಲಸ ಮಾಡುವವರಿಗೆ ಕೇಳಿದಾಗ ಕೇಂದ್ರ ಸರ್ಕಾರ ಭೂ ಸ್ವಾದೀನ ಮಾಡಿಕೊಂಡಿದೆ ಅಂತಾ 2017-18 ರಲ್ಲಿ ಹೇಳಿದರು. ಪರಿಹಾರ ಸರಿಯಾಗಿದೆ ಎಂದು ಸ್ವೀಕಾರ ಮಾಡಿದ್ದೇವೆ ಎಂದರೆ ಸರಿಯಲ್ಲ. ಪರಿಹಾರಕ್ಕೆ ತಕರಾರು ಸಲ್ಲಿಸಿದ್ದೇವೆ. ಹೆಚ್ಚಿನ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಭೂ ಸ್ವಾದೀನ ಅಧಿಕಾರಿಗಳು 5 ವರ್ಷದ ಖರೀದಿ ಪತ್ರಗಳನ್ನ ಪರಿಶೀಲನೆ ಮಾಡಿ ಹೆಚ್ಚಿನ ಪರಿಹಾರವನ್ನು ಕೊಟ್ಟಿದ್ದಾರೆಂದರೆ ಸರಿಯಲ್ಲ. 1 ಗುಂಟೆಗೆ ಎಷ್ಟು ಬೆಲೆ ಇದೆ ಎಂದು ನಾನು ದಾಖಲೆ ಕೊಟ್ಟಿಲ್ಲ. ದಾಖಲೆಗಳನ್ನು ಹುಡುಕಲು ಪ್ರಯತ್ನ ಮಾಡಿಲ್ಲ. ಲೇಔಟ ಆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಜೈನ ಕಾಲೇಜ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಾಯಿ, ಅಣ್ಣ ಅಕ್ಕತಂಗಿಯರ ಹೆಸರಿನಲ್ಲಿ ಜಮೀನು ಇದೆ. ನಾವು ಉತಾರ ಹಾಜರುಪಡಿಸಿದ್ದೇನೆ. ಈ ಕೇಸಿನಲ್ಲಿ ನಮ್ಮ ಹೆಸರಿನಲ್ಲಿದ್ದ ಯಾವುದೇ ಪಹಣಿ ಪತ್ರಿಕೆಯನ್ನುಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಜಮೀನು ಅಳತೆ ಮಾಡಿದ್ದಾರೆಂದರೆ ಸರಿಯಲ್ಲ. ತಕರಾರು ಅರ್ಜಿ ಕೊಟ್ಟಿದ್ದೇನೆ. ಅದರ ಸ್ವೀಕೃತಿ ತೆಗೆದುಕೊಂಡಿಲ್ಲ. ಅಳತೆ ಮಾಡಿದ್ದು ಸರಿಯಾಗಿದೆ. ತಕರಾರು ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಭೂ ಸ್ವಾದೀನ ಅಧಿಕಾರಿಗಳು ಸರಿಯಾಗಿ ಅಳತೆ ಮಾಡಿದ್ದಾರೆಂದರೆ ಸರಿಯಲ್ಲ. ಜಮೀನು ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಬರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಮ್ಮ ಜಮೀನು ಹುಬ್ಬಳ್ಳಿಯಿಂದ 10-12 ಕಿ ಮೀ ದೂರ ಇದೆ ಎಂದರೆ ಸರಿಯಲ್ಲ. ಸುತ್ತಮುತ್ತ ಕೃಷಿ ಭೂಮಿ ಇದೆ ಎಂದರೆ ಸರಿ. ನಮ್ಮ ಜಮೀನು ಎನ್ ಎ ಮಾಡಿಲ್ಲ. ಭೂ ಸ್ವಾದೀನ ಅಧಿಕಾರಿಗಳು ಕೃಷಿ ಜಮೀನು ಸ್ವಾದೀನಪಡಿಸಿಕೊಂಡಿರುತ್ತಾರೆಂದರೆ ಸರಿ. ಭೂ ಸ್ವಾದೀನ ಅಧಿಕಾರಿಗಳು ಎಲ್ಲಾ ನೋಡಿಕೊಂಡು ದರ ನಿಗದಿಪಡಿಸಿದ್ದಾರೆಂದರೆಸರಿಯಲ್ಲ. ಸಿದ್ದರೂಢ ಮಠ ಮತ್ತು ಮೂರು ಸಾವಿರ ಮಠ , ಕಾಲೇಜು ಹುಬ್ಬಳ್ಳಿಯಲ್ಲಿವೆ ಎಂದರೆ ಸರಿ. ಅಲ್ಲಿಂದ ನಮ್ಮ ಜಮೀನು 20 ಕಿ

ಮೀ ಆಗುತ್ತದೆ ಎಂದರೆ 3-4 ಕಿ ಮೀ ಆಗುತ್ತದೆ ಎನ್ನುತ್ತಾರೆ. ನ್ಯಾಯಾಲಯದ ಆದೇಶ ಬಿಟ್ಟರೇ ಬೇರೆ ದಾಖಲೆಯನುನ ದರ ತೋರಿಸಲು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 3 ನಮ್ಮ ಉಣಕಲ ಗ್ರಾಮದ ಜಮೀನಿನ ಮೇಲೆ ಆದೇಶವಾಗಿದೆ. ಒಂದು ಗುಂಡೆ ಎರಡೂವರೆ ಲಕ್ಷ ಆಗಿದೆ. ನಿಪಿ 1 1 ಎಕರೆಗೆ 98 ಲಕ್ಷ ಆಗಿದೆ ಎಂದರೆ ಸರಿಯಲ್ಲ. ನಿಪಿ 2 ಒಂದು ಗುಂಟೆಗೆ 3,23,433 ಆಗಿದೆ ಎಂದರೆ ಸರಿ. ಅದನ್ನು ಪ್ರಶ್ನೆ ಮಾಡಿ ರೇಲ್ವೆದವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಿದ್ದರು ಎಂದರೆ ಸರಿ. ಮಾನ್ಯ ಹೈ ಕೋರ್ಟ ನಿಪಿ 3 ರಂತೆ ಒಂದು ಗುಂಟೆಗೆ 2,50,000 ರೂ ಆದೇಶ ಮಾಡಿದೆ ಎಂದರೆ ಸರಿ. ನಿಪಿ 1 ರಿಂದ 3 ನ್ನು ಬಿಟ್ಟರೇ ನಾನು ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಭೂ ಸ್ವಾಧೀನ ಅಧಿಕಾರಿಗಳು ಸರಿಯಾಗಿ ಪರಿಹಾರ ನೀಡಿದ್ದಾರೆಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಎ ಎಫ ಆರ್ ವಕೀಲರಿಂದಃ**

3 ಮತ್ತು 4 ನೇ ಪ್ರತಿವಾದಿಯರನ್ನು ಸೇರ್ಪಡೆ ಮಾಡಿದ್ದೇವೆಂದರೆ ಸರಿ. ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪ್ರತಿವಾದಿ ನಂ. 3 ಮತ್ತು 4 ರವರಿಗೆ ಕೊಟ್ಟಿದ್ದೇವೆ. ಎಲ್ ಎ ಸಿ ಆಗುವ ಪೂರ್ವದಲ್ಲಿ ಮಿಸಲೆಯನ್ಸ ಆಗಿರುತ್ತದೆ ಎಂದರೆ ಸರಿ. ಎಲ್ ಎ ಸಿ ಆಗುವ ಮುಂಚೆ ಮಿಸಲೆಯಿನ್ಸ ಪ್ರಕರಣ ದಾಖಲು ಮಾಡಿದ್ದೆವು. ಎಲ್ ಎ ಸಿ ಆಗುವ ಪೂರ್ವದಲ್ಲಿ ಕಲಂ 18 ರಡಿಯಲ್ಲಿ ಅರ್ಜಿ ಸಲ್ಲಿಸಬೇಕು ಎಂದರೆ ಸರಿ. ಆ ಅರ್ಜಿ ಸಲ್ಲಿಸುವುದಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಭೂಮಿಯ ಮಾಲೀಕರು ಅಂತಾ ತೋರಿಸಲು ಉತಾರವನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಯು ನಿಶಾನೆಗಳನ್ನು ನೋಡಿ ಅದರಲ್ಲಿ ಉತಾರ ಇಲ್ಲ ಎಂದು ನುಡಿಯುತ್ತಾರೆ. ಉಪವಿಭಾಗ ಅಧಿಕಾರಿಗಳಿಂದ ನೋಟಿಸು ಬಂದಿರುತ್ತದೆ ಎಂದರೆ ಸರಿಯಲ್ಲ. ಕಲಂ 4 ರಡಿಯಲ್ಲಿ ನೋಟಿಸ ಹೊರಡಿಸಿರುತ್ತಾರೆಂದರೆ ಗೊತ್ತಿಲ್ಲ. ನಂತರ ಕಲಂ 6 ರಲ್ಲಿ ನೋಟಿಸ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಜೆ ಎಂ ಸಿ ಆದ ನಂತರ ನೋಟಿಸ ಕೊಡುತ್ತಾರೆಂದರೆ ಸರಿಯಲ್ಲ. ನೋಟಿಸ ಕೊಟ್ಟಾಗ ಸಂಬಂದಪಟ್ಟ ಅಧಿಕಾರಿಗೆ ಪರಿಹಾರ ಕೇಳಿದ್ದೇವೆಂದರೆ ಸರಿಯಲ್ಲ. 12 ಗುಂಟೆ 12 ಅಣೆ ಭೂ ಸ್ವಾಧೀನಪಡಿಸಿಕೊಂಡಿದ್ದಾರೆ. ಅರ್ಜಿಯಲ್ಲಿ 6 ಗುಂಟೆ 1 ಅಣೆ ಎಂದು ಬರೆಯಲಾಗಿದೆ ಎಂದರೆ ಸರಿ. ಸರ್ವೆ ನಂ. 215/2 ರಲ್ಲಿ 6 ಗುಂಟೆ 8 ಅಣೆ ಭೂಸ್ವಾಧೀನವಾಗಿದೆ ಎಂದು ಹೇಳಿದ್ದೇವೆ ಎಂದರೆ ಸರಿ. ಹೆಚ್ಚಿನ ಪರಿಹಾರ ಬೇಡಿ ಯಾವುದೇ ಅರ್ಜಿ ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಸುತ್ತಮುತ್ತ ಪೆಟ್ರೋಲ ಬಂಕ, ವಾಣಿಜ್ಯ ಮಳಿಗೆ ಮತ್ತು ಶಾಲಾಕಾಲೇಜು ಇವೆ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಭೂ ಸ್ವಾಧೀನ ಅಧಿಕಾರಿ 5 ವರ್ಷ ಹಿಂದಿನ ದಾಖಲೆ

ಮತ್ತು ಮುಂದಿನ 3 ವರ್ಷಗಳ ದಾಖಲೆ ಆಧಾರದ ಮೇಲೆ ಐತೀರ್ಪು ಮಾಡಿರುತ್ತಾರೆಂದರೆ ಸರಿಯಲ್ಲ. ನಮ್ಮದು ಕೃಷಿ ಭೂಮಿ. ನಮ್ಮ ಜಮೀನು ಬಿನ್ ಶೇತ್ಕಿಯಾಗಿಲ್ಲ. ಕಾಲಮಿತಿ ಅವಧಿಯಲ್ಲಿ ಅರ್ಜಿ ಸಲ್ಲಿಸಿಲ್ಲ ಹೆಚ್ಚಿನ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.ನಮ್ಮ ಜಮೀನಿಂದ ಬಸ್ ನಿಲ್ದಾಣ 3 ಕಿ ಮೀ ಇದೆ. ನಗರದ ಮಧ್ಯದಲ್ಲಿ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನ ಅದಿಫಿಕಾರಿಗಳು ಯೋಗ್ಯವಾಗಿ ಐತಿರ್ಪು ನೀಡಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣ ಹೆಚ್ಚಿನ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.